ಅಟಲ್‌ಜೀ ಜನಸ್ನೇಹಿ ಕೇಂದ್ರ ಸ್ಥಾಪನೆ

876 (798); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಮಾಡಬಾಳ್ ಗ್ರಾಮದಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರವು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೇಂದ್ರವನ್ನು ಮಾಗಡಿ ಪಟ್ಟಣಕ್ಕೆ ಸ್ಥಾಪಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಇ) ಯಾವ ಕಾಲಮಿತಿಯಲ್ಲಿ ಸ್ಥಾಪಿಸಲಾಗುವುದು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಮಾಗಡಿ ತಾಲ್ಲೂಕು ಮಾಡಬಾಳ್ ಹೋಬಳಿ ಕೇಂದ್ರದಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ ಪ್ರತಿ ದಿನಕ್ಕೆ ಸರಾಸರಿ 28 ಅರ್ಜಿಗಳು ಸ್ವೀಕೃತವಾಗುತ್ತಿದ್ದು, ಕಳೆದ ಒಂದು ವರ್ಷದಲ್ಲಿ ಸಾರ್ವಜನಿಕರಿಂದ ವಿವಿಧ ಸೇವಾ ಪ್ರಮಾಣ ಪತ್ರ ಕೋರಿ 52,485 ಅರ್ಜಿಗಳು ಸ್ವೀಕೃತವಾಗಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆಯುಂಟಾಗದಂತೆ 48,206 ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ.

ಆ) ಇನ್ನು ಮುಂದೆ ಯಾವುದೇ ಹೆಚ್ಚುವರಿ ಫ್ರಂಟ್ ಆಫೀಸನ್ನು ಮಂಜೂರು ಮಾಡಬಾರದೆಂದು ಆರ್ಥಿಕ ಇಲಾಖೆಯ ಅಭಿಪ್ರಾಯ ನೀಡಿರುವುದರಿಂದ, ಇ–ಆಡಳಿತ ಇಲಾಖೆಯಿಂದ ಆರಂಭಿಸಲಾಗುತ್ತಿರುವ ನಾಗರೀಕ ಸೇವಾ ಕೇಂದ್ರಗಳಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಸೇವೆಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ. ರಾಜ್ಯಾದ್ಯಂತ over The Counter ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು. ಸದರಿ ಯೋಜನೆಯು ಅನುಷ್ಠಾನಗೊಂಡ ನಂತರವೂ ಸಹ,

ಹೆಚ್ಚುವರಿ ಫ್ರಂಟ್ ಆಫೀಸ್‌ಗಳ ಅವಶ್ಯಕತೆ ಕಂಡುಬಂದಲ್ಲಿ ಮಾಗಡಿ ಪಟ್ಟಣಕ್ಕೆ ಫ್ರಂಟ್ ಆಫೀಸ್ ಸ್ಥಾಪಿಸಲು ಪರಿಶೀಲಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಪರಿಹಾರ ವಿತರಣೆ

877 (756); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ವನ್ಯಪ್ರಾಣಿಗಳಿಂದ ಜಾನುವಾರುಗಳಿಗೆ ಹಾಗೂ ಬೆಳೆಗಳಿಗೆ ಹಾನಿಯಾದ ಪ್ರಕರಣಗಳು ಎಷ್ಟು; (ವಿವರ ನೀಡುವುದು)

ಆ) ಅವುಗಳಲ್ಲಿ ಇದುವರೆಗೆ ಎಷ್ಟು ಜನರಿಗೆ ಪರಿಹಾರ ವಿತರಣೆ ಮಾಡಲಾಗಿದೆ; ಇನ್ನುಳಿದವರಿಗೆ ಯಾವಾಗ ಪರಿಹಾರ ವಿತರಣೆ ಮಾಡಲಾಗುವುದು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) 2014–15ನೇ ಸಾಲಿನಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ವನ್ಯಪ್ರಾಣಿಗಳಿಂದ 03 ಜಾನುವಾರು ಹತ್ಯೆ ಪ್ರಕರಣ ಹಾಗೂ 929 ಬೆಳೆ ನಷ್ಟ ಪ್ರಕರಣಗಳು ವರದಿಯಾಗಿರುತ್ತವೆ.

ಆ) ಈವರೆಗೆ ಪಾವತಿಸಿದ ದಯಾತ್ಮಕ ಧನದ ವಿವರ ಈ ಕೆಳಕಂಡಂತಿದೆ:

ಜಾನುವಾರು ಹತ್ಯೆ		ಬೆಳೆ ನಷ್ಟ	
ಪ್ರಕರಣ ಸಂಖ್ಯೆ	ಪಾವತಿಸಿದ ಮೊತ್ತ	ಪ್ರಕರಣ ಸಂಖ್ಯೆ	ಪಾವತಿಸಿದ ಮೊತ್ತ
03	8,000/–	706	11,95,803/–